ಒ.ಎಸ್. ನಂ.95/2022
ಪಿಡಬ್ಲು-1

<u>ದಿನಾಂಕ 23-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ ಪ್ರತಿ ವಾದಿ ಪರ ವಕೀಲರಿಂದ</u>**

ನಾನು 3ನೇ ತರಗತಿಯವರೆಗೆ ವಿದ್ಯಭ್ಯಾಸ ಮಾಡಿರುತ್ತೇನೆ. ದಾವಾ ಸ್ವತ್ತಿನ ಚಕ್ಕು ಬಂದಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 4 ಎಕರೆ 4 ಗುಂಟೆ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ 3-4 ಪ್ರಕರಣಗಳು ಆಗಿವೆ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ 116/2012 ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾದ ಮೇಲೆ ಅಪೀಲು ಸಲ್ಲಿಸಲಾಗಿದ್ದು ಸದರಿ ಅಪೀಲನಲ್ಲಿ ನಾನು ಹಾಜರಾಗಿರುತ್ತೇನೆ ಎಂದರೆ ಸರಿ.

ಆರ್ ಎ ನಂಬರ 5/2018ರ ತೀರ್ಪಿನ ಪ್ರತಿಯಲ್ಲಿ ದಾವಾ ಆಸ್ತಿಯನ್ನು ಗುರುಸ್ವಾಮಿ ಎಂದು ಮಾರಾಟ ಮಾಡಿರುತ್ತಾರೆ ಎಂದು ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಿದ್ದಯ್ಯಾ ಎಂಬುವವರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಒಂದು ಪಾಲು ವಾಟ್ನ ದಾವೆ ಇರುತ್ತದೆ ಎಂದರೆ ಸರಿಯಲ್ಲ. ಇದೆ ನ್ಯಾಯಾಲಯದಲ್ಲಿ ಈರಮ್ಮ , ಸಾಯಿಬಣ್ಣ , ಇತರರು ಸೇರಿ ಅಸಲು ದಾವಾ ನಂಬರ 78/2023 ಇದೇ ನ್ಯಾಯಾಲಯದಲ್ಲಿ ನನ್ನ ಹಾಗೂ ನನ್ನ ತಾಯಿ ವಿರುದ್ದ ದಾವೆ ಸಲ್ಲಿಸಿರುತ್ತಾರ ಎಂದರೆ ಸರಿ. ಅಸಲು ದಾವಾ ನಂ. 78/2023 ಕರಾರಿನ ನಿರ್ದಿಷ್ಟ ಪರಿಹಾರ ಅಧಿನಿಯಮದಡಿ ನಮ್ಮ ವಿರುದ್ದ ನನ್ನ ಹಾಗೂ ನನ್ನ ತಾಯಿಯವರು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಅಸಲು ದಾವಾ ನಂ. 78/2023 ಸಲ್ಲಿಸಿರುವುದರಿಂದ ಪ್ರತಿವಾದಿಯರೇ ಖಬ್ಜೆಯಲ್ಲಿ ಇರುತತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯನ್ನು ಮಾರಾಟ ಮಾಡಿಲ್ಲವೆಂದು ಮತ್ತು ಪ್ರತಿವಾದಿಯರು ವಿನಾಃ ಕಾರಣ ನಮ್ಮ ಖಬ್ಜೆಗೆ ತೊಂದರೆ ಕೊಡುತ್ತಾರೆ ಎಂದು ವಾದ ಪತ್ರದಲ್ಲಿ ಬರೆಯಿಸಿರುತ್ತೇನೆ ಎಂದರೆ ಸಾಕ್ಷಿಯು ಬರೆಯಿಸಿರುತ್ತೇನೆ ಎಂದು ಹೇಳುತ್ತಾರೆ. ದಿನಾಂಕ 03.01.1989 ರಲ್ಲಿ ನನ್ನ ತಂದೆ ಗುರುಸಿದ್ದಯ್ಯ ಇವರು ಖರೀದಿ ಕರಾರು ಪತ್ರ ಪ್ರತಿವಾದಿಯರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾ ನಂ. 78/2023 ರಲ್ಲಿ ದಾವಾ ಆಸ್ತಿಯನ್ನು ಪರಬಾರೆ ಮಾಡಬಾರದೆಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ . ನನ್ನ ತಂದೆ ಇತರ ವಾರಸುದಾರರನ್ನು ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಬೇರೆ ಬೇರೆ ಕಡೆಗೆ ವಾಸವಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಸಹೋದರ ಸಹೋದರಿಯರು ಈ ದಾವೆಯನ್ನು ನಡೆಸಲು ಯಾವುದೇ ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. ನನ್ನ ತಮ್ಮ

ತಿಮ್ಮಯ್ಯ ತೀರಿಕೊಂಡಿದ್ದು, ಅವರ ವಾರಸುದಾರರನ್ನು ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ.

**(ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ನೀಡಿದ್ದರಿಂದ ಅವಕಾಶ ನೀಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ